ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ತಾಲ್ಲೂಕುಗಳನ್ನು ಪುನರ್ ರಚನೆ ಮಾಡುವ ಸಂಬಂಧ ಇದುವರೆಗೆ ಒಟ್ಟು ನಾಲ್ಕು ಸಮಿತಿಗಳು ಅಂದರೆ ಶ್ರೀ ಎಂ. ವಾಸುದೇವರಾವ್ ಆಯೋಗ, ಶ್ರೀ ಟಿ.ಎಂ. ಹುಂಡೇಕರ್ ಸಮಿತಿ, ಶ್ರೀ ಪಿ.ಸಿ. ಗದ್ದಿಗೌಡರ್ ಸಮಿತಿ ಮತ್ತು ಶ್ರೀ ಎಂ.ಬಿ.ಪ್ರಕಾಶ್ ಅಧ್ಯಕ್ಷತೆಯ ಸಮಿತಿಗಳನ್ನು ನೇಮಿಸಲಾಗಿತ್ತು.

ಶ್ರೀ ಎಂ.ಬಿ. ಪ್ರಕಾಶ್ ನೇತೃತ್ವದ ಸಮಿತಿಯು ಶಿಫಾರಸ್ಸುಗಳನ್ನು ದಿನಾಂಕ: 30.5.2009 ರಂದು ಸರ್ಕಾರಕ್ಕೆ ಸಲ್ಲಿಸಿದ್ದು, ವರದಿಯು ಪರಿಶೀಲನೆಯಲ್ಲಿದ್ದು ಅಂತಿಮ ನಿರ್ಣಯ ತೆಗೆದುಕೊಳ್ಳಬೇಕಿದೆ.

ಆ) ಅನ್ವಯಿಸುವುದಿಲ್ಲ.

ಆಸರೆ ಯೋಜನೆ

611 (1067) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕದಲ್ಲಿ ಕಳೆದ ವರ್ಷ ನೆರೆ ಹಾವಳಿಗೆ ತುತ್ತಾದ ಪ್ರದೇಶಗಳ ಜನರಿಗೆ ಪುನರ್ ವಸತಿ ಕಲ್ಪಿಸುವ ಸಲುವಾಗಿ ಆಸರೆ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಎಷ್ಟು ಮನೆಗಳನ್ನು ಯಾರು ಯಾರು ನಿರ್ಮಿಸಿಕೊಟ್ಟಿದ್ದಾರೆ (ಮನೆ ನಿರ್ಮಿಸಿ ಕೊಟ್ಟಿರುವವರ ಹೆಸರು, ವಿವರಗಳನ್ನು ಒದಗಿಸುವುದು);

ಆ) ಹಾಗಿದ್ದಲ್ಲಿ, ಇಲ್ಲಿಯವರೆವಿಗೆ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು, ಸಂಘ-ಸಂಸ್ಥೆಗಳು/ದಾನಿಗಳು ನೀಡಿರುವ ಹಣದ ಮೊತ್ತವೆಷ್ಟು ಹಾಗೂ ಇನ್ನೂ ಎಷ್ಟು ಮನೆಗಳನ್ನು ನಿರ್ಮಿಸಿಕೊಡುವ ಗುರಿ ಹೊಂದಲಾಗಿದೆ;

ಇ) ನೆರೆ ಹಾವಳಿಗೆ ತುತ್ತಾಗಿರುವ ಜನರ ಪುನರ್ ವಸತಿ ಯೋಜನೆಯ ಅನುಷ್ಠಾನದ ಹೊಣೆಯನ್ನು ಯಾವ ಯಾವ ಅಧಿಕಾರಿಗಳಿಗೆ ವಹಿಸಿಕೊಡಲಾಗಿದೆ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು);

ಈ) ಕಳೆದ ಒಂದು ವರ್ಷದ ಅವಧಿಯಲ್ಲಿ ಈ ಸ್ಥಳಗಳಿಗೆ ಅಧಿಕಾರಿಗಳು ಎಷ್ಟು ಭಾರಿ ಭೇಟಿ ನೀಡಿದ್ದಾರೆ ಮತ್ತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಯಾವ ವರದಿಗಳನ್ನು ನೀಡಿದ್ದಾರೆ, ಅಧಿಕಾರಿಗಳ ಹೆಸರು, ವಿವರಗಳನ್ನು ಒದಗಿಸುವುದು;

ಊ) ಅಧಿಕಾರಿಗಳು ಕೆಲವು ಕಡೆಗಳಲ್ಲಿ ಈ ಬಗ್ಗೆ ನಿರ್ಲಕ್ಷ್ಯ ತೋರುತ್ತಿರುವುದಾಗಿ ದೂರುಗಳು ಬಂದಿರುವುದು ನಿಜವೇ, ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ದಾನಿಗಳಾದ ಅಮೃತಾನಂದ ಮಯಿ ಇವರು ರಾಯಚೂರು ಜಿಲ್ಲೆಯ ಕೊರವಾಕಲು ಮತ್ತು ಮಾಂಗಿಕಡ್ಡಿ ಗ್ರಾಮಗಳಲ್ಲಿ ಒಟ್ಟು 103 ಮನೆಗಳನ್ನು ಕಟ್ಟಿಸಿ ಸರ್ಕಾರಕ್ಕೆ ಹತ್ತಾಂತರಿಸಿರುತ್ತಾರೆ.

ಆ) ಗ್ರಾಮಗಳ ಸ್ಥಳಾಂತರಕ್ಕೆ ಭೂಮಿ ಖರೀದಿಗಾಗಿ ಒಟ್ಟು ರೂ. 155.00 ಕೋಟಿ ವೆಚ್ಚ ಮಾಡಲಾಗಿದೆ. ಸಂಘ-ಸಂಸ್ಥೆಗಳು/ದಾನಿಗಳಿಂದ ಒಟ್ಟು ರೂ. 101.64 ಕೋಟಿ ಬಂದಿರುತ್ತದೆ. ಒಟ್ಟು 63213 ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ.

ಇ) ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ.

ಈ) ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಸ್ಥಳಗಳಿಗೆ ಭೇಟಿ ನೀಡಿ ನಡೆಯುತ್ತಿರುವ ಪುನರ್ವಸತಿ ಕಾರ್ಯಗಳ ಬಗ್ಗೆ ವರದಿ ನೀಡಿರುತ್ತಾರೆ.

ಉ) ಯಾವುದೇ ನಿರ್ಲಕ್ಷ ತೋರುವುದಿಲ್ಲ ಬೃಹತ್ ಪ್ರಮಾಣದಲ್ಲಿ ಪುನರ್ವಸತಿ ಕಾರ್ಯಕೈಕೊಳ್ಳಲಾಗುತ್ತಿದೆ. ದೂರುಗಳ ಬಗ್ಗೆ ಪರಿಶೀಲನೆ ನಡೆಸಿ ತುರ್ತು ಪರಿಹಾರ ನೀಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ

613 (1069) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಕಳೆದ ವರ್ಷದ ಆಯವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಿಡಲಾಗಿತ್ತು;

ಆ) ಮೀಸಲಿರಿಸಿದ್ದಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಇಲ್ಲಿಯವರೆವಿಗೆ ಬಿಡುಗಡೆಯಾಗಿ ವೆಚ್ಚವಾದ ಹಣವೆಷ್ಟು;

ಇ) ಈ ಹಣದಲ್ಲಿ ಕೈಗೆತ್ತಿಕೊಂಡಿರುವ ಜಿಲ್ಲಾವಾರು ಅಭಿವೃದ್ಧಿ ಕೆಲಸಗಳ ವಿವರಗಳೇನು;